1. ಕಬ್ಬು ಬೆಳೆಗೆ ಸರ್ಕಾರ ನಿಗದಿ ಪಡಿಸಿರುವ ಹಣವನ್ನು ನೀಡಲು ಹೋರಾಟ ಮಾಡುತ್ತಿರುವ ಬಗ್ಗೆ

ಶ್ರೀ ಗೋವಿಂದ ಎಂ. ಕಾರಜೋಳ(ಮುಧೋಳ): ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಕಬ್ಬು ಬೆಳೆಗಾರ ರೈತರು ಒಂದು ಟನ್ ಕಬ್ಬಿಗೆ ಸರ್ಕಾರ ನಿಗದಿ ಪಡಿಸಿದ್ದ 2,500 ರೂಪಾಯಿಗಳನ್ನು ಕೊಡಿಸಬೇಕೆಂದು ಫ್ರೀಡಂ ಪಾರ್ಕ್‌ನಲ್ಲಿ ಹೋರಾಟ ಮಾಡುತ್ತಿದ್ದರು. ಅವರನ್ನು ಸರ್ಕಾರ ಏಕಾಏಕಿ ಜೈಲಿಗೆ ಹಾಕಿದೆ. ಸರ್ಕಾರದ ನಿರ್ಣಯವನ್ನು ನಾನು ಖಂಡಿಸುತ್ತೇನೆ. ಸರ್ಕಾರ ರೈತರಿಗೆ ಮೋಸ ಮಾಡಿದೆ. ರೈತರಿಗೆ ಅನ್ಯಾಯ ಮಾಡಿದೆ. ಇವತ್ತು ಸಾವಿರಾರು ಜನ ರೈತರು ಜೈಲಿನಲ್ಲಿದ್ದಾರೆ. ಅದಕ್ಕಾಗಿ ಕೂಡಲೇ ಅವರನ್ನು ಬಿಡುಗಡೆ ಮಾಡಬೇಕು. ಟನ್‌ಗೆ 2,500 ರೂಪಾಯಿ ಬೆಲೆ ಏನು ನಿಗದಿಯಾಗಿದೆ. ಅದನ್ನು ಪ್ರತಿಯೊಂದು ಕಾರ್ಖಾನೆಗಳಿಂದ ಕೊಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಮೊದಲು ಪ್ರಶ್ನೋತ್ತರ ಆಗಲಿ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ಬೆಳಗಾವಿ ಅಧಿವೇಶನದಲ್ಲಿಯೂ ಇದೆ ಸಮಸ್ಯೆ ಬಂದಿತ್ತು. ಅಲ್ಲಿಯೂ ಇದರ ಬಗ್ಗೆ ಸರ್ಕಾರ ಸ್ಪಷ್ಟವಾದಂತಹ ನಿಲುವನ್ನು ತೆಗೆದುಕೊಳ್ಳಲಿಲ್ಲ. ಆದ್ದರಿಂದ ಅದರ ಬಗ್ಗೆ detail ಆಗಿ ಚರ್ಚೆ ಮಾಡಬೇಕು. ಬಹಳ ಗಂಭೀರವಾದಂತಹ ವಿಚಾರ. ಮೊದಲು ಸರ್ಕಾರ ಅವರನ್ನು ಮಾತುಕತೆಗೆ ಕರೆಯಲಿ.ಅದನ್ನು ಬಿಟ್ಟು ಅವರನ್ನು arrest ಮಾಡುವುದು, ಜೈಲಿಗೆ ಕಳುಹಿಸುವುದು ಸರಿಯಲ್ಲ. ಇದು ರೈತರ ವಿರೋಧಿ ಧೋರಣೆ.

ಅಧ್ಯಕ್ಷರು: ಆಯಿತು, ಇವತ್ತೇ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಲಕ್ಷಣ ಸಂಗಪ್ಪ ಸವದಿ(ಅಥಣಿ): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೇ, ಇವತ್ತು ಸಾವಿರಾರು ಜನ ರೈತರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಬೆಂಗಳೂರಿಗೆ ಬಂದಂತಹ ಸಂದರ್ಭದಲ್ಲಿ ಸರ್ಕಾರ ಅವರನ್ನು ಜೈಲಿಗೆ ಹಾಕಿದೆ. ತುರ್ತಾಗಿ ಯಾವುದೇ ವಿಷಯಗಳಿಲ್ಲ ಎಂದು ಕಾಣಿಸುತ್ತದೆ. ದಯಮಾಡಿ ಇದರ ಬಗ್ಗೆ ಚರ್ಚೆ ಮಾಡಬೇಕು.

ಅಧ್ಯಕ್ಷರು: ಆಯಿತು, ಇವತ್ತೇ ಚರ್ಚೆಗೆ ತೆಗೆದುಕೊಳ್ಳೋಣ. ಈಗ ಪ್ರಶ್ನೋತ್ತರ. ಮಾನ್ಯ ಶ್ರೀ ಕೆ.ಬಿ. ಕೋಳಿವಾಡರವರು ಮಾತನಾಡುವುದು.

2. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ನಗರಯೋಜನಾ ಪ್ರಾಧಿಕಾರವನ್ನು ಪರಿವರ್ತಿಸುವುದು

31(316) ಶ್ರೀ ಕೋಳಿವಾಡ ಕೆ.ಬಿ (ರಾಣೆಬೆನ್ನೂರು)

(ಅ) ರಾಣೆಬೆನ್ನೂರು ನಗರವು ಜಿಲ್ಲಾ ಕೇಂದ್ರವಾದ ಹಾವೇರಿ ನಗರಕ್ಕಿಂತಲೂ ಮೂರು ಪಟ್ಟು ದೊಡ್ಡದಾಗಿದ್ದು, ಈ ನಗರದಲ್ಲಿರುವ ನಗರ ಯೋಜನೆ ಪ್ರಾಧಿಕಾರವನ್ನು ನಗರಾಭಿವೃದ್ಧಿ ಪ್ರಾಧಿಕಾರವನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಅವಧಿಯೊಳಗಾಗಿ ಪರಿವರ್ತಿಸುವ ಕಾರ್ಯವನ್ನು ಮಾಡಲಾಗುವುದು?

ಶ್ರೀ ವಿನಯಕುಮಾರ್ ಸೊರಕೆ(ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) ರಾಣೆಬೆನ್ನೂರು ಪಟ್ಟಣಕ್ಕೆ ನಗರಾಭಿವೃದ್ಧಿ ಪ್ರಾಧಿಕಾರ ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.